## ಮಧ್ಯಂತರ ಅರ್ಜಿ ನಂ. VI ರ ಮೇಲೆ ಆದೇಶ

1. ಅರ್ಜಿದಾರ/ವಾದಿಯು ದಿವಾಣಿ ಪ್ರಕ್ರಿಯಾ ಸಂಹಿತೆ ಆದೇಶ-26 ನಿಯಮ-9 ಮತ್ತು 10 ರ ಜೊತೆಗೆ ಕಲಂ151 ರಡಿಯಲ್ಲಿ ಪ್ರಸ್ತುತ ಅರ್ಜಿಯನ್ನು ಸಲ್ಲಿಸಿ ದಾವಾಸ್ತಿ ಹಾಗೂ ಪ್ರತಿವಾದಿಯರ ಆಸ್ತಿಯನ್ನು ಸರ್ವೇ ಮಾಡಿ, ಒತ್ತುವರಿ ಕುರಿತು ನಕ್ಷೆ ಸಹಿತ ವರದಿ ಸಲ್ಲಿಸಲು ADLR ಅಂಕೋಲಾರವರ ಸರ್ವೇಯರ್ ನೇಮಿಸಲು ವಿನಂತಿಸಿರುತ್ತಾರೆ.

**2.** ಸದರಿ ಅರ್ಜಿ ಜೊತೆಗೆ ಲಗತ್ತಿಸಿದ ಮೆಮೊದಲ್ಲಿ ಪ್ರತಿವಾದಿಯರು ದಾವಾಸ್ತಿಯ ಚೆಕ್‌ಬಂಧಿಯನ್ನು ಪ್ರಶ್ನಿಸಿರುತ್ತಾರೆ ಹಾಗೂ ದಾವಾಸ್ತಿಯನ್ನು ಅತಿಕ್ರಮಿಸುವ ಪ್ರಯತ್ನದಲ್ಲಿರುತ್ತಾರೆ. ಕಾರಣ ದಾವಾಸ್ತಿಯನ್ನು ಹಾಗೂ ಪ್ರತಿವಾದಿಯರ ಆಸ್ತಿಯನ್ನು ಅಳತೆ ಮಾಡಿ ಅತಿಕ್ರಮಣ ಇರುತ್ತದೆಯೆ ಎಂದು ವರದಿ ಸಮೇತ ನಕ್ಷೆ ಸಲ್ಲಿಸಲು ADLR ಅಂಕೋಲಾ ರವರ ಸರ್ವೆಯರ್ ರವರನ್ನು ನೇಮಿಸಲು ಮೆಮೊ ಆಫ್ ಫ್ಯಾಕ್ಟ್ ನಲ್ಲಿ ತಿಳಿಸಿರುತ್ತಾರೆ.

**3.** ಸದರಿ ಅರ್ಜಿಗೆ ಪ್ರತಿವಾದಿಯರ ಪರ ತಕಾರಾರು ಇಲ್ಲವೆಂದು ತಿಳಿಸಿರುತ್ತಾರೆ.

**4.** ವಾದವನ್ನು ಆಲಿಸಿದ ನಂತರ, ವಾದಿಯ ಪರ ನಿರ್ಧರಿತ ಪ್ರಕರಣವನ್ನು ಮೆಮೋದೊಂದಿಗೆ ಸಲ್ಲಿಸಿರುತ್ತಾರೆ. ಅರ್ಜಿಯನ್ನು ನಿರ್ಧರಿಸಲು ಈ ಕೆಳಗಿನ ಅಂಶಗಳು ಉದ್ಭವಿಸಿರುತ್ತವೆ.

**ಅಂಶಗಳು**

1. ಮಧ್ಯಂತರ ಅರ್ಜಿ ನಂ. VI ರಲ್ಲಿ ಕೇಳಿದ ಪರಿಹಾರ ಪಡೆಯಲು ವಾದಿ ಅರ್ಹರಿರುತ್ತಾಳೆಯೇ ?
2. ಯಾವ ಆದೇಶ ?

**ಕಾರಣಗಳು**

**5.** **ಅಂಶ ನಂ.1**:-ದಾವಾಸ್ತಿಯ ಕಬ್ಜಾ ವಹಿವಾಟಿಗೆ ಪ್ರತಿವಾದಿಯರು ತಕಾರಾರು ಮಾಡದಂತೆ ನಿರಂತರ ಮನಾಯಿ ಕೇಳಿ ವಾದಿ ಪ್ರಸ್ತುತ ದಾವೆ ಸಲ್ಲಿಸಿರುತ್ತಾರೆ. ಅಂಕೋಲಾ ತಾಲೂಕಿನ ಹೆಬ್ಬುಳ ಗ್ರಾಮದ ಸರ್ವೇ/ ಬ್ಲಾಕ್ ನಂ. 14/2 ವಿಸ್ತೀರ್ಣ 1-ಎಕರೆ 29-ಗುಂಟೆ ಪೈಕಿ 10-ಗುಂಟೆ ದಾವಾಸ್ತಿಯಾಗಿರುತ್ತದೆಂದು ತಿಳಿಸಿರುತ್ತಾರೆ. ಸದರಿ ದಾವಾಸ್ತಿ ಕಬ್ಜಾ ವಹಿವಾಟಿಗೆ ಪ್ರತಿವಾದಿಯರು ತೊಂದರೆಪಡಿಸಿರುವುದರಿಂದ ಈ ದಾವೆ ಸಲ್ಲಿಸುವ ಕಾರಣ ಉಂಟಾಗಿರುತ್ತದೆಂದು ವಾದಿ ತಿಳಿಸಿರುತ್ತಾರೆ. ಸದರಿ ಸಂಗತಿಗಳನ್ನು ಅಲ್ಲಗಳೆದು ಪ್ರತಿವಾದಿಯರು ತಮ್ಮ ಪ್ರತಿವಾದಿ ಪತ್ರವನ್ನು ಸಲ್ಲಿಸಿರುತ್ತಾರೆ. ದಾವೆಯು ನಿರಂತರ ಮನಾಯಿ ಸಲುವಾಗಿರುವುದರಿಂದ

ಆ ಕುರಿತು ಮೊದಲಿನ ಪೀಠಾಸೀನಾಧಿಕಾರಿಗಳು ರಚಿಸಿದ ವಿವಾದಾಂಶಗಳ ಮೇಲೆ ಈಗಾಗಲೇ ಪಕ್ಷಗಾರರು ಸಾಕ್ಷ್ಯದಾರ ನೀಡಿರುತ್ತಾರೆ. ದಾವಾಸ್ತಿಯ ಕಬ್ಜೆ ಹಾಗೂ ಶಾಂತರೀತಿಯ ವಹಿವಾಟಿಗೆ ಪ್ರತಿವಾದಿಯರು ತೊಂದರೆ ಉಂಟುಪಡಿಸಿರುತ್ತಾರೆಯೇ ಎಂದು ಸಾಭೀತುಪಡಿಸಲು ವಾದಿ ಪರವಾಗಿ ಪೂರಕವಾದ ಸಾಕ್ಷ್ಯದಾರ ನೀಡಬೇಕಾಗಿರುತ್ತದೆ.

6. ದಾವೆ ನಿರಂತರ ಮನಾಯಿ ಸಲುವಾಗಿ ಸಲ್ಲಿಸಿರುವುದರಿಂದ ವಾದಿ-ಪ್ರತಿವಾದಿಯರ ನಡುವೆ ಇರುವ ವಿವಾದವನ್ನು ಬಗೆಹರಿಸಲು ಬೇಕಾದ ಸಾಕ್ಷ್ಯದಾರ ನೀಡಲು ಪಕ್ಷಗಾರರಿಗೆ ಅವಕಾಶವಿರುತ್ತದೆ, ವಿನಃ ಪ್ರತಿವಾದಿಯರು ದಾವಾಸ್ತಿ ಕಬ್ಜಾ ವಹಿವಾಟಿ ಅಲ್ಲಗಳೆದ ಮಾತ್ರಕ್ಕೆ ದಾವಾಸ್ತಿ ಹಾಗೂ ಪ್ರತಿವಾದಿಯರ ಆಸ್ತಿ ಕುರಿತು ಸರ್ವೇ ಮಾಡಿಸಿ ಪರಸ್ಪರ ಅತಿಕ್ರಮಣದ ವರದಿ ಅವಶ್ಯವಿರುವುದಿಲ್ಲ ಹಾಗೂ ಅತೀಕ್ರಮಣದ ಕುರಿತು ದಾವೆ ಪಕ್ಷಗಾರರ ಹೇಳಿಕೆಯಾಗಲೀ ವ, ಆ ಕುರಿತು ಮಾಗಣೆಯಾಗಲಿ ಇರುವುದಿಲ್ಲ.

7. ಅದು ಅಲ್ಲದೇ ಪಕ್ಷಗಾರರು ನೀಡಿದ ಸಾಕ್ಷ್ಯದಾರಗಳ ಮೇಲೆ ವಿವಾದಿತ ವಿಷಯಗಳನ್ನು ನಿರ್ಧರಿಸಲು ಸಾಧ್ಯವಾಗದಿದ್ದಾಗ ಆ ಕುರಿತು ವಾಸ್ತವಿಕ ಸ್ಥಿತಿ-ಗತಿ ಕೋರ್ಟ್ ಕಮಿಷನರ್ ಮೂಲಕ ಕಂಡುಕೊಳ್ಳಲು ನ್ಯಾಯಾಲಯಕ್ಕೆ ಅವಕಾಶವಿರುತ್ತದೆ. ಆದರೆ ಪ್ರಸ್ತುತ ದಾವೆಯು ನಿರಂತರ ಮನಾಯಿ ಸಲುವಾಗಿ ಹಾಗೂ ದಾವಾಸ್ತಿ ಕಬ್ಜಾ ವಹಿವಾಟನ್ನು ವಾದಿ

ಹೊಂದಿರುತ್ತಾಳೆಂದು ವಾದಪತ್ರ ದಲ್ಲಿ ಸ್ಪಷ್ಟವಾಗಿ ನಮೂದಿಸಿರುವುದರಿಂದ ಅತಿಕ್ರಮಣದ ಪ್ರಶ್ನೆ ಉದ್ಭವಿಸಲಾರದು.

**8.** ವಾದಿ ಮಧ್ಯಂತರ ಅರ್ಜಿಯ ಮೇಲೆ ಮಾಡಿದ ಸುನಾವಣೆಗೆ ಪೂರಕವಾಗಿ ಗೌರವಾನ್ವಿತ ಆಂಧ್ರಪ್ರದೇಶ ಉಚ್ಚ ನ್ಯಾಯಾಲಯದ ನಿರ್ಧರಿತ ಪ್ರಕರಣವಾದ ಬಂಡಿ ಸ್ಯಾಮ್ಯುಯಲ್ ಮತ್ತು ಇನೊಬ್ಬ ವಿರುದ್ಧ ಮೆಡಿದ ನಾಗೇಶ್ ರಾವ್ (Civil Revision Petition No.338/2016 Dated-04/11/2016)ನ್ನು ಮೆಮೊದೊಂದಿಗೆ ಸಲ್ಲಿಸಿರುತ್ತಾರೆ.ಸದರಿ ಪ್ರಕರಣದ ವಸ್ತುಸ್ಥಿತಿ ಅವಲೋಕಿಸಿದಾಗ ಆ ದಾವೆಯ ಪ್ರತಿವಾದಿಯು ABCD ಎಂಬುವ ದಾರಿಯನ್ನು ಬಂದ್ ಮಾಡಿ ಕಟ್ಟಡ ನಿರ್ಮಿಸಿ ವಾದಿಗೆ ತೊಂದರೆ ಉಂಟುಪಡಿಸಿರುವ ಕಾರಣ ಪಕ್ಷಗಾರರ ನಡುವೆ ಸದರಿ ವಿವಾದ ಇತ್ಯರ್ಥಪಡಿಸಲು ಕೋರ್ಟ್ ಕಮಿಷನರ್ ಅವಶ್ಯವಿರುತ್ತದೆಂದು ಅವಲೋಕಿಸಿರುತ್ತಾರೆ. ಆದರೆ ಪ್ರಸ್ತುತ ದಾವೆಯಲ್ಲಿನ ವಸ್ತುಸ್ಥಿತಿಗೂ ಹಾಗೂ ವಾದಿ ಪರ ಹಾಜರುಪಡಿಸಿದ ನಿರ್ಧರಿತ ಪರಿಸ್ಥಿತಿ ಒಂದಕ್ಕೊಂದು ತಾಳೆಯಾಗುವುದಿಲ್ಲ . ಕಾರಣ ಸದರಿ ನಿರ್ಧರಿತ ಪ್ರಕರಣವು ಮಧ್ಯಂತರ ಅರ್ಜಿ ನಂ.6 ನ್ನು ಪುರಸ್ಕರಿಸಲು ಸಹಾಯಕ್ಕೆ ಬರಲಾರದು. ಆದ್ದರಿಂದ ಅಂಶ ನಂ.1 ಕ್ಕೆ **"ನಕಾರಾತ್ಮಕ"**ವೆಂದು ಉತ್ತರಿಸಿದ್ದೇನೆ.

9. **<u>ಅಂಶ ನಂ.2ಃ</u>** ಮೇಲೆ ಚರ್ಚಿಸಿದ್ದರ ಅನುಗುಣವಾಗಿ ಈ ಕೆಳಗಿನಂತೆ....

**<u>ಆದೇಶ</u>**

ದಿವಾಣಿ ಪ್ರಕ್ರಿಯಾ ಸಂಹಿತೆ ಆದೇಶ–26ರ ನಿಯಮ–9 ಮತ್ತು 10ರ ಜೊತೆಗೆ ಕಲಂ–151ರಡಿಯಲ್ಲಿ ವಾದಿ ಸಲ್ಲಿಸಿದ ಮಧ್ಯಂತರ ಅರ್ಜಿ ನಂ.6ನ್ನು ರೂ.100/– ಖರ್ಚಿನ ಮೇಲೆ ವಜಾಗೊಳಿಸಲಾಗಿದೆ..

ವಾದ–ವಿವಾದದಕ್ಕಾಗಿ ಪ್ರಕರಣವನ್ನು ನಂತರ ಕರೆಯಿರಿ

**ದಿವಾಣಿ ನ್ಯಾಯಾಲಯ , ಅಂಕೋಲಾ**